# 'ಲೋಕದಲ್ಲಿ ಹುಟ್ಟಿದ ಒಬ್ಬನೇ ಒಬ್ಬ ಪರಿಪೂರ್ಣ ಸೌಂದರ್ಯದ ವ್ಯಕ್ತಿ'

ಹಸ್ಟನ್ ಸ್ಮಿತ್

*ಕನ್ನಡ ಅನುವಾದ:*
ಡಾ. ಹೆಚ್. ರಾಮಚಂದ್ರಸ್ವಾಮಿ

ತನ್ನ ಅನುಕಂಪೆಯಿಂದ ವಿಶ್ವವನ್ನೇ ಗೆದ್ದ ಏಸುಕ್ರಿಸ್ತನ ವ್ಯಕ್ತಿತ್ವ ಮತ್ತು ಬೋಧನೆಗಳ ಮಹತ್ವವನ್ನು ಈ ಬರಹ ಸ್ವಾರಸ್ಯವಾಗಿ ಬಿಂಬಿಸುತ್ತದೆ. ವಿಶ್ವಧರ್ಮಗಳ ಬಗೆಗಿನ ತಮ್ಮ ಪುಸ್ತಕದಲ್ಲಿ, ಹೆಸರಾಂತ ಇಂಗ್ಲೀಷ್ ಲೇಖಕ ಹಸ್ಟನ್ ಸ್ಮಿತ್ ಅವರು ಬರೆದಿರುವ ಏಸುಕ್ರಿಸ್ತನ ಕುರಿತ ಬರಹದ ಸರಳ ಸಂಗ್ರಹ ರೂಪವಿದು. ಇನ್ನೂ ಪ್ರಕಟವಾಗಬೇಕಾಗಿರುವ ಈ ಪುಸ್ತಕದ ಕನ್ನಡದ ಅನುವಾದ, ವಿವೇಕಪ್ರಭ ಓದುಗರಿಗೆ ಚಿರಪರಿಚಿತರಾಗಿರುವ, ಡಾ. ಹೆಚ್. ರಾಮಚಂದ್ರಸ್ವಾಮಿ ಅವರದು.


## ಯಾರವನು?

ಕ್ರೈಸ್ತಧರ್ಮವು ಮೂಲಭೂತವಾಗಿ ಚಾರಿತ್ರಿಕ ಘಟನಾವಳಿಗಳನ್ನು ಅವಲಂಬಿಸಿದ ಧರ್ಮ. ಇವುಗಳಲ್ಲಿ ಮುಖ್ಯವಾದ ಘಟನೆ ಎಂದರೆ ಕೊಟ್ಟಿಗೆಯೊಂದರಲ್ಲಿ ಹುಟ್ಟಿದ ಯಹೂದಿ ಬಡಗಿಯೊಬ್ಬನ ಜೀವನ. ಮೂವತ್ತಮೂರು ವರ್ಷಕ್ಕೇ ಅವನನ್ನು ಪಾತಕಿಯೆಂದು ನಿರ್ಣಯಿಸಿ ಕೊಂದುಹಾಕಿದರು. ತಾನು ಹುಟ್ಟಿದ ಸ್ಥಳದಿಂದ ತೊಂಭತ್ತು ಮೈಲಿಯಾಚೆ ಅವನು ಹೋದವನಲ್ಲ; ತನ್ನದೆಂದು ಏನನ್ನೂ ಇಟ್ಟುಕೊಳ್ಳದವನು; ಸೈನ್ಯಕ್ಕೆ ಸೇರಲಿಲ್ಲ; ಪುಸ್ತಕ ಬರೆಯುವ ಬದಲು ಮರಳಿನ ಮೇಲೆ ಬರೆದ. ಅವನ ಹುಟ್ಟುಹಬ್ಬವನ್ನು ಪ್ರಪಂಚದಾದ್ಯಂತ ಜನರು ಆಚರಿಸುತ್ತಾರೆ; ಯಾರವನು? ಅವನೇ ಪ್ರೇಮಮೂರ್ತಿ ಏಸುಕ್ರಿಸ್ತ.

ಅವನು ಬಹುಶಃ ಸುಮಾರು ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಹೆರಾಡ್ ದೊರೆಯ ಆಳ್ವಿಕೆಯ ಪ್ಯಾಲಸ್ಟೈನ್‌ನಲ್ಲಿ ಹುಟ್ಟಿರಬಹುದೆಂದು ಅಂದಾಜು ಮಾಡಿರುವರು. ಆ ಕಾಲದ ಇನ್ನಿತರ ಯಹೂದಿಗಳಂತೆಯೆ ನಜ಼ರೇತ್ ಅಥವಾ ಅದರ ಸಮೀಪದಲ್ಲಿ ಅವನು ಬೆಳೆದನೆಂದು ತೋರುತ್ತದೆ. ಮುಂಬರಲಿರುವ ದೇವರ ನ್ಯಾಯತೀರ್ಪಿನ ದಿನವನ್ನು (Judgment Day) ಕುರಿತು ಉದ್ಘೋಷಿಸುತ್ತ ಜನರನ್ನು ಆವೇಶಕ್ಕೊಳಪಡಿಸುತ್ತಿದ್ದ ಪ್ರವಾದಿ ಜಾನ್ ಈ ಯುವಕನಿಗೆ ದೀಕ್ಷಾಸ್ನಾನ ಮಾಡಿಸಿದನು. ತನ್ನ ಮೂವತ್ತನೆಯ ವಯಸ್ಸಿನ ವೇಳೆಗೆ ಅವನು ಪ್ಯಾಲೆಸ್ಟೈನಿನ ಗೆಲಿಲಿ ಪ್ರದೇಶದಲ್ಲಿ ಧರ್ಮಬೋಧನೆಯ ಕೆಲಸವನ್ನು ಸುಮಾರು ಮೂರು ವರ್ಷಗಳ ಕಾಲ ನಡೆಸಿದನು. ಕಾಲಕ್ರಮದಲ್ಲಿ ಅವನ ನಿಲುವು ಅವನ ಕೆಲವು ದೇಶಬಾಂಧವರಿಗೆ ಹಿಡಿಸಲಿಲ್ಲ. ಹಾಗೂ ರೋಮ್ ಪ್ರಾಧಿಕಾರವೂ ಅವನ ಮೇಲೆ ಸಂಶಯ ತಳೆಯಿತು. ಆದ್ದರಿಂದ ಅವನನ್ನು ಜೆರೂಸಲೆಂ ನಗರದ ಹೊರವಲಯದಲ್ಲಿ ಶಿಲುಬೆಗೇರಿಸಲಾಯಿತು. ಸ್ವಲ್ಪದರಲ್ಲಿ ಹೇಳುವುದಾದರೆ, ಏಸುಕ್ರಿಸ್ತನು ಹೀಬ್ರೂ ಚರಿತ್ರೆಯ ಸಂಪ್ರದಾಯದಲ್ಲೇ ನೆಲೆಗೊಂಡಿದ್ದ, ಅದ್ಭುತ ಪ್ರದೀಪ್ತ ವ್ಯಕ್ತಿತ್ವದ ಅತ್ಯಾಕರ್ಷಕ ಪವಾಡಪುರುಷನಾಗಿದ್ದನು.

## ಭಗವಂತನಾದುದು ಹೇಗೆ?

ಒಬ್ಬ ಐತಿಹಾಸಿಕ ವ್ಯಕ್ತಿಯಾದ ಏಸುಕ್ರಿಸ್ತ, ಅವನ ಅನುಯಾಯಿಗಳ ಪಾಲಿಗೆ, ಭೂಮಿಗಿಳಿದು ಬಂದ ಭಗವಂತನಾದುದು



ಹೇಗೆ? ಅವನು ಸಾಯುವ ಮೊದಲು ಶಿಷ್ಯರು ಈ ತೀರ್ಮಾನಕ್ಕೆ ಬರದೇ ಇದ್ದರೂ, ಅವನು ಬದುಕಿದ್ದಾಗಲೇ ಈ ಭಾವ ಗಾಢವಾಗತೊಡಗಿತ್ತು.

ಒಂದು ಸಲ ಏಸುಕ್ರಿಸ್ತನ ಶಿಷ್ಯ ಪೀಟರ್, ಗುಂಪೊಂದನ್ನುದ್ದೇಶಿಸಿ ಮಾತನಾಡುತ್ತಿದ್ದಾಗ ಏಸು ತನ್ನ ಜೀವಿತ ಕಾಲದಲ್ಲಿ ಏನು ಮಾಡಿದನೆಂಬುದನ್ನು ಸಂಗ್ರಹವಾಗಿ ಹೇಳಬೇಕಾದ ಪ್ರಸಂಗ ಬಂದಾಗ, "**ಅವನು ಒಳ್ಳೆಯದನ್ನು ಮಾಡುತ್ತಲೇ ಹೋದ**" ಎಂದನಂತೆ. ಸರಳವಾದರೂ ಮನ ಮಿಡಿಯುವ ಶ್ರದ್ಧಾಂಜಲಿ ಅದು. ಸಾಮಾಜಿಕವಾಗಿ ಸಾಮಾನ್ಯರೆನ್ನಿಸಿದ ಜನಗಳ ನಡುವೆಯೂ ಯಾವ ಸಂಕೋಚವಿಲ್ಲದೆ ಸುಲಭವಾಗಿ ಸಂಚರಿಸುತ್ತ, ಅವರ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತ, ಸಲಹೆ ನೀಡುತ್ತ, ಸಹಾಯ ಮಾಡುತ್ತ, ಅವರನ್ನು ಖಿನ್ನತೆಯ ನಿರಾಶೆಯ ಕೂಪದಿಂದ ಮೇಲೆತ್ತುವ ಪ್ರಯತ್ನ ಮಾಡುತ್ತ, ಏಸುಕ್ರಿಸ್ತ, ಒಳ್ಳೆಯದನ್ನು ಮಾಡುತ್ತಲೇ ನಡೆದ. ಒಂದೇ ಮನಸ್ಸಿನಿಂದ ಅದೆಷ್ಟು ಪರಿಣಾಮಕಾರಿಯಾಗುವಂತೆ ಆ ಕೆಲಸವನ್ನು ನಿರ್ವಹಿಸುತ್ತ ಆತ ನಡೆದನೆಂದರೆ, ಅವನ ಜೊತೆಗಿದ್ದವರ ಮನಸ್ಸಿನಲ್ಲಿ ಅವನ ಮೇಲಣ ಅಭಿಪ್ರಾಯ ಉನ್ನತವಾಗುತ್ತಲೇ ಹೋಯಿತು; ಭಗವಂತನ ದಿವ್ಯತೆ ಎಂಬುದು

ಮಾನವರೂಪ ತಳೆದದ್ದೇ ಆದರೆ ಅದು ಹೀಗಿರಬಹುದಲ್ಲವೆ ಎಂದೆನಿಸುವವರೆಗೆ ಬೆಳೆಯುತ್ತಲೇ ಹೋಯಿತು.

**ಏನು ಬೋಧಿಸಿದ?**

ಏಸುಕ್ರಿಸ್ತನ ಭಾಷೆಯ ಅಧ್ಯಯನವೇ ಮನಸ್ಸಿಗೆ ಮುದ ಕೊಡುವಂಥದು. **ಪ್ರೇಮ, ದೃಢತೆ, ನಿತ್ಯಾನಿತ್ಯ ವಿವೇಕದ ಜೀವಂತಿಕೆ** – ಇವು ಸತ್ವಪೂರ್ಣ ಧಾರ್ಮಿಕ ಸಾಹಿತ್ಯದ ಲಕ್ಷಣಗಳೆಂದಾದರೆ, ಏಸುಕ್ರಿಸ್ತನ ಮಾತುಗಳನ್ನು ಅಮರವಾಗಿಸಲು ಈ ಗುಣಗಳಷ್ಟೇ ಸಾಕು. "ನಿಮ್ಮ ಕೈ ನಿಮಗೆ ತೊಂದರೆ ಮಾಡುತ್ತದೆಯಾದರೆ, ಅದನ್ನು ಕತ್ತರಿಸಿ ಹಾಕಿ. ನಿಮ್ಮ ಕಣ್ಣು ನಿಮಗೂ ಒಳ್ಳೆಯದಕ್ಕೂ ನಡುವೆ ನಿಲ್ಲುವುದಾದರೆ, ಅದನ್ನು ಕಿತ್ತೊಗೆಯಿರಿ" ಎನ್ನುವ ಏಸು ತಮ್ಮ ಕಣ್ಣುಗಳಿಂದ ದಿಮ್ಮಿಗಳೇ ಹೊರಹೊಮ್ಮುತ್ತಿರುವಾಗ ಇನ್ನೊಬ್ಬರ ಕಣ್ಣಿನಲ್ಲಿ ಧೂಳು ಬಿದ್ದಿದೆ ಎನ್ನುವವರನ್ನು ಹೀಗಳೆಯುತ್ತಾನೆ. ತಮ್ಮ ಬಾಹ್ಯ ಜೀವನ ಸುಂದರವಾಗಿ ಅಲಂಕರಿಸಲ್ಪಟ್ಟ ಭವ್ಯ ಸಮಾಧಿಯಂತೆ ಶೋಭಿಸುತ್ತಿದ್ದರೂ ಅಂತರಂಗದ ಜೀವನ, ಕೊಳೆತು ನಾರುವ ಶವಗಳ ಆಗರವಾಗಿರುವವರನ್ನು ಏಸುಕ್ರಿಸ್ತನು ಮೂದಲಿಸುತ್ತಾನೆ. ಇಲ್ಲಿ ಮನವೊಲಿಸಿಕೊಳ್ಳುವ ಭಾಷಣಕಲೆಯ ಭಾಷೆಯಿಲ್ಲವಾದರೂ ಈ ಬಗೆಯ ಭಾಷೆಯೇ ಏಸುಕ್ರಿಸ್ತನ ಸಂದೇಶದ ಅವಿಭಾಜ್ಯ ಭಾಗವಾಗಿದ್ದು, ಅದನ್ನು ಶಕ್ತಿಯುಕ್ತವನ್ನಾಗಿ ಮಾಡಿದೆ ಎನ್ನುವುದು ನಿಸ್ಸಂದೇಹ.

ಜನರಿಗೆ ತಾವೇನು ಮಾಡಬೇಕು, ಏನನ್ನು ನಂಬಬೇಕು ಎಂದು ಹೇಳುವ ಬದಲು, ಏಸು ಲೋಕದೆಡೆಗೆ ವಿಭಿನ್ನ ದೃಷ್ಟಿ ಬೆಳೆಸಿಕೊಳ್ಳಿರಿ ಎನ್ನುತ್ತಾನೆ. ಹಾಗೆ ಮಾಡಿದರೆ ಅವರ ನಡತೆ ಬದಲಾಯಿಸುತ್ತದೆ ಎಂದು ಅವನಿಗೆ ಖಚಿತವಾಗಿತ್ತು. ಇದಕ್ಕೆ ವೈಚಾರಿಕತೆಯ ಬಳಕೆಗಿಂತ ಜನರ ಕಲ್ಪನೆಯ ಬಳಕೆ ಅಗತ್ಯವೆಂದು ಅವನಿಗೆ ಗೊತ್ತಿತ್ತು. ಜನರ 'ಸತ್ಯ'ದ ಕಲ್ಪನೆ ಅವರು ದಿನನಿತ್ಯ ನೋಡುವ ಸಂಗತಿಗಳನ್ನೇ ಒಳಗೊಂಡಿರುವುದರಿಂದ ಅವುಗಳಿಂದಲೇ ಅವನು ತನ್ನ ಬೋಧನೆಯನ್ನು ಪ್ರಾರಂಭಿಸುತ್ತಾನೆ. ಸಾಸಿವೆ ಕಾಳು, ಕಲ್ಲುಸೇಲ, ಮದುವೆ–ಮದ್ಯ, ಸೇವಕರು–ಒಡೆಯರು – ಇಂತಹ ವಿಶಿಷ್ಟ ಸಂಗತಿಗಳನ್ನೇ ಬಳಸುತ್ತಾನೆ. ಅವನ ಕೇಳುಗರ ಪ್ರಪಂಚದ ತುಂಬ ಇಂಥವೇ ಸಂಗತಿಗಳಿರುವುದರಿಂದ ಅವನ ಮಾತಿಗೆ ಹೀಗೊಂದು ವಾಸ್ತವಿಕತೆಯ ಚೌಕಟ್ಟು ಒದಗುತ್ತದೆ.

ಏಸುಕ್ರಿಸ್ತನದು ದೊಡ್ಡ ಪ್ರಮಾಣದ ಬೋಧನೆ ಏನಲ್ಲ; ಏಕೆಂದರೆ ಹೊಸ ಒಡಂಬಡಿಕೆಯಲ್ಲಿ(New Testament) ಇರುವುದೆಲ್ಲವನ್ನೂ ಒಂದೆರಡು ಗಂಟೆಗಳಲ್ಲಿ ಹೇಳಿ ಮುಗಿಸಬಹುದು: "ನಿಮ್ಮ ನೆರೆಯವನನ್ನು ನಿಮ್ಮ ಹಾಗೆಯೇ ಎಂದು ತಿಳಿದು ಪ್ರೀತಿಸಿ"; "ಬೇರೆಯವರು ನಿಮ್ಮನ್ನು ಹೇಗೆ ನಡೆಸಿಕೊಳ್ಳಬೇಕೆಂದು ಬಯಸುತ್ತೀರೋ ಹಾಗೆ ನೀವು ಅವರೊಡನೆ ನಡೆದುಕೊಳ್ಳಿ"; "ಬದುಕಿನ ಭಾರವನ್ನು ಹೊತ್ತು ಬಳಲುತ್ತಿರುವ ನೀವೆಲ್ಲರೂ ನನ್ನ ಬಳಿಗೆ ಬನ್ನಿ, ನಾನು ನಿಮಗೆ ವಿಶ್ರಾಂತಿ ದೊರಕುವ ಹಾಗೆ ಮಾಡುವೆ"; "ಸತ್ಯವನ್ನು ನೀವು ಅರಿಯುವಿರಿ, ಆ ಸತ್ಯ ನಿಮ್ಮನ್ನು ಮುಕ್ತಗೊಳಿಸುವುದು". – ಇವೆಲ್ಲ ಕೆಲವು ಮಾದರಿಗಳು. ಆದರೂ, ಬಹುವಾಗಿ ಅವನು ಹೇಳಿದ್ದು ದೃಷ್ಟಾಂತ ಕಥೆಗಳನ್ನೇ. ಅವುಗಳನ್ನು ಕೇಳಿದವರು "ಆಹಾ! ಇವನು ಅಧಿಕಾರಯುಕ್ತವಾಗಿ ಮಾತನಾಡುತ್ತಾನೆ... ಯಾರೂ ಎಂದೂ ಹೀಗೆ ನುಡಿದವರಿಲ್ಲ!" ಎಂದು ಉದ್ಗರಿಸಬೇಕು. ಹಾಗೆ ಏಸುವು ಮಾತನಾಡುತ್ತಿದ್ದನು.

ಸಾಧ್ಯವಿರುವ ಎಲ್ಲ ರೀತಿಯಿಂದಲೂ ಕೇಡನ್ನು ವಿರೋಧಿಸಬೇಕು ಎನ್ನುವುದು ಲೋಕರೂಢಿಯ ನೀತಿ; ಆದರೆ ಕೇಡನ್ನು ವಿರೋಧಿಸುವುದಕ್ಕೆ ಹೋಗಬೇಡಿ, ಬದಲಿಗೆ ಕಪಾಳಕ್ಕೆ ಹೊಡೆದವರಿಗೆ ನಿಮ್ಮ ಇನ್ನೊಂದು ಕೆನ್ನೆಯನ್ನು ಒಡ್ಡಿ ಎನ್ನುತ್ತಾನೆ ಏಸುಕ್ರಿಸ್ತ. ಸ್ನೇಹಿತರನ್ನು ಪ್ರೀತಿಸಿ, ಶತ್ರುಗಳನ್ನು ದ್ವೇಷಿಸುವುದು ಲೋಕರೂಢಿ; ಆದರೆ ಶತ್ರುಗಳನ್ನು ಪ್ರೀತಿಸಿರಿ, ಶಪಿಸಿದವರಿಗೆ ಶುಭ ಹಾರೈಸಿರಿ ಎನ್ನುತ್ತಾನೆ. ಆಚಾರವಂತಿಕೆಯ ದಬ್ಬಾಳಿಕೆ ಮಾಡಿಕೊಂಡು ಸಮಾಜದಲ್ಲಿ ದೊಡ್ಡವರೆನ್ನಿಸಿಕೊಂಡವರಿಗಿಂತ ಅವರಿಗೂ ಮೊದಲು, ಸಮಾಜಬಾಹಿರರೂ ವೇಶ್ಯೆಯರೂ ದೇವರ ರಾಜ್ಯವನ್ನು ಪಡೆಯುತ್ತಾರೆ ಎನ್ನುತ್ತಾನೆ; ಛೆ, ಇದೆಂಥ ಮಾತು, ಸಮಾಜದಲ್ಲಿ ಗೌರವಾನ್ವಿತರಾದವರು ಮೆರವಣಿಗೆಯ ಮುಂಚೂಣಿಯಲ್ಲಿರಬೇಕು ಎನ್ನುತ್ತದೆ ಪ್ರಪಂಚ. ಮುಕ್ತಿಯ ಪ್ರವೇಶದ್ವಾರ ಕಿರಿದು ಎನ್ನುತ್ತಾನೆ ಏಸುಕ್ರಿಸ್ತ; ಅದು ದೊಡ್ಡದಾಗಿರಲಿ ಎಂದು ನಿರೀಕ್ಷಿಸುತ್ತದೆ ಪ್ರಪಂಚ. ಪಕ್ಷಿಗಳಂತೆ, ಪುಷ್ಪಗಳಂತೆ ಮುಕ್ತಮನಸ್ಸಿನವರಾಗಿರಿ ಎನ್ನುತ್ತಾನೆ ಏಸು; ವ್ಯವಹಾರ ಪರಿಜ್ಞಾನವಿರಲಿ ಎನ್ನುತ್ತದೆ ಪ್ರಪಂಚ. ಶ್ರೀಮಂತರು ದೇವನ ರಾಜ್ಯವನ್ನು ಪ್ರವೇಶಿಸುವುದು ಒಂಟೆಯೊಂದು ಸೂಜಿಯ ಕಣ್ಣಿನಲ್ಲಿ ತೂರಿ ಹೋಗುವುದಕ್ಕಿಂತಲೂ ಕಷ್ಟ ಎನ್ನುತ್ತಾನೆ ಏಸು; ಲೋಕ ಸಿರಿವಂತರನ್ನು ಓಲೈಸುತ್ತದೆ. ವಿನೀತರಾದ, ಅಳಬಲ್ಲ, ದಯೆ ತುಂಬಿದ ಅಂತಃಕರಣವುಳ್ಳ ಶುದ್ಧಹೃದಯರು ಸುಖವಾಗಿರುತ್ತಾರೆ ಎನ್ನುತ್ತಾನೆ ಏಸು; ಕುಲೀನತೆ, ಸಿರಿವಂತಿಕೆ, ಅಧಿಕಾರ ಮುಂತಾದುವು ಸುಖದ ಸೋಪಾನಗಳು ಎಂದುಕೊಳ್ಳುತ್ತದೆ ಪ್ರಪಂಚ. ಈ ಬೋಧನೆಗಳ ಬಿರುಗಾಳಿಯನ್ನೆದುರಿಸಲು ಭಯಪಡುವ ನಾವು ಇನ್ನೂ ಅದಕ್ಕೆ ಸಿದ್ಧರಾಗಿಲ್ಲವೆಂದೆನಿಸುತ್ತದೆ. **ಹೆಚ್.ಜಿ.ವೆಲ್ಸ್ ಹೇಳಿದಂತೆ, ಈ ಏಸುಕ್ರಿಸ್ತನಿಗೆಲ್ಲೋ ಹುಚ್ಚಿರಬೇಕು, ಇಲ್ಲವೇ ಅವನನ್ನು ಗ್ರಹಿಸಲು ನಮ್ಮ ಹೃದಯವಂತಿಕೆ ತೀರ ಅಲ್ಪವಾಗಿರಬೇಕು.**

ಬೋಧನೆಗಳೆಲ್ಲ ಯಾವುದರ ಬಗ್ಗೆ ?

ಈ ಬೋಧನೆಗಳೆಲ್ಲ ಯಾವುದರ ಬಗ್ಗೆ ಎಂದು ಇನ್ನೊಮ್ಮೆ ನೋಡೋಣ. ಏಸುಕ್ರಿಸ್ತನ ಬಾಯಿಂದ ಉದುರಿದ ಆಣಿಮುತ್ತುಗಳೆಲ್ಲ ಮಾನವ ಜಾಗೃತಿಯನ್ನು ಜೀವನದ ಎರಡು ಮುಖ್ಯವಾದ ಅಂಶಗಳ ಮೇಲೆ ಕೇಂದ್ರೀಕರಿಸುವ ಭೂತಗನ್ನಡಿಯಂತಿರುತ್ತಿದ್ದವು. ಒಂದು, ದೇವರ ಕೃಪೆಯು ಎಂದಿಗೂ ಬತ್ತದ ತೊರೆ ಎನ್ನುವುದು. ಇನ್ನೊಂದು, ಜನರು ಅದನ್ನು ಸ್ವೀಕರಿಸಿ

**'ಲೋಕದಲ್ಲಿ ಒಬ್ಬನೇ ಒಬ್ಬ ಪರಿಪೂರ್ಣ ಸೌಂದರ್ಯದ ವ್ಯಕ್ತಿ ಇದ್ದಾನೆ – ಅವನೇ ಕ್ರಿಸ್ತ. ಆ ಅನಂತಪ್ರೇಮದ ಮೂರ್ತಿ. ಅವನು ಆದಿ ಅಂತ್ಯಗಳಿಲ್ಲದ ಅಚ್ಚರಿ!' – *ದೋಸ್ತೋವ್‌ಸ್ಕಿ (ವಿಖ್ಯಾತ ರಷ್ಯನ್ ಕಾದಂಬರಿಕಾರ)***

ತಮ್ಮ ಮೂಲಕ ಇತರರಿಗೂ ಹರಿಯುವಂತೆ ಮಾಡಬೇಕಾದ ಅವಶ್ಯಕತೆ ಇದೆ ಎನ್ನುವುದು. ಹೀಗೆ ಜನರಿಗೆ ಮುಕ್ತಿ ದೊರಕಿಸಿ ಕೊಡುವುದಕ್ಕಾಗಿ ಇರುವ ದೇವರ ಅನಂತ ಪ್ರೇಮಪ್ರವಾಹವನ್ನು ಅನುಭವಿಸಿದ ಏಸುಕ್ರಿಸ್ತ ಯಹೂದಿ ಧರ್ಮದ ಸಂತಾನವಾಗಿದ್ದನು. ತೊಂಬತ್ತೊಂಬತ್ತು ಕುರಿಗಳನ್ನು ಹಾಗೇ ಬಿಟ್ಟು ತಪ್ಪಿಸಿಕೊಂಡಿದ್ದ ಒಂದು ಕುರಿಯನ್ನು ಹುಡುಕಿಕೊಂಡು ಹೊರಟ ಕುರುಬನ ಕಥೆಯಂತೆ, ಏಸುವು ತನ್ನ **ಬೋಧನೆಯುದ್ದಕ್ಕೂ ದೇವರ ಅಹೈತುಕ ಪ್ರೇಮ, ಪ್ರತಿಯೊಬ್ಬ ಮಾನವನ ಮೇಲೂ ಏಕಪ್ರಕಾರವಾಗಿದೆ ಎಂದೇ ಪ್ರತಿಪಾದಿಸುತ್ತ ಬಂದನು. ದೇವರ ಈ ಅದ್ಭುತ ಪ್ರೇಮವನ್ನು ಗುರುತಿಸಿ, ಅದು ತಮ್ಮ ವ್ಯಕ್ತಿತ್ವದ ಕಣಕಣಕ್ಕೂ ಇಳಿಯುವಂತೆ ಮಾಡುವುದೊಂದೇ ಜನರ ಕರ್ತವ್ಯವಾಗಬೇಕು; ಅದು ಪೂರ್ಣಕೃತಜ್ಞತೆಯಿಂದ ಕೂಡಿರಬೇಕು ಎನ್ನುವುದು ಅವನ ನಿಲುವು.**

ಅವಶ್ಯವಾದರೆ ನಾವು ಇತರರಿಗೆ ನಮ್ಮ ನಿಲುವಂಗಿಯ ಜೊತೆಗೆ ಅಂಗಿಯನ್ನೂ ಬಿಚ್ಚಿಕೊಡಬೇಕು – ಏಕೆ? ದೇವರು ನಮ್ಮ ಆವಶ್ಯಕತೆಯನ್ನು ಪೂರೈಸಿರುವುದರಿಂದ. ನಾವು ಇತರರೊಂದಿಗೆ ಇನ್ನೂ ಒಂದು ಮೈಲಿ ಹೆಜ್ಜೆಹಾಕಬೇಕು – ಏಕೆ? ನಮ್ಮ ಅಂತರಾಳಕ್ಕೆ ಗಾಢವಾಗಿಯೆ ಅರಿವಿದೆ, ದೇವನು ನಮ್ಮೊಂದಿಗೆ ಇನ್ನೂ ಹೆಚ್ಚು ದೂರ ನಮ್ಮನ್ನು ರಕ್ಷಿಸಿಕೊಂಡು ಬಂದಿರುವನೆಂದು. ನಮ್ಮ ಹಿತವರನ್ನಲ್ಲದೆ ಶತ್ರುಗಳನ್ನೂ ಸಹ ಪ್ರೀತಿಸಬೇಕು, ನಮ್ಮನ್ನು ಶಿಕ್ಷಿಸುವವರಿಗಾಗಿ ಸಹ ಪ್ರಾರ್ಥಿಸಬೇಕು, ಏಕೆ? "ಸ್ವರ್ಗದಲ್ಲಿರುವ ನಿಮ್ಮ ತಂದೆಯ ಮಕ್ಕಳು ನೀವಾಗುವುದಕ್ಕಾಗಿ; ಏಕೆಂದರೆ ಅವನು ಸೂರ್ಯನನ್ನು ಸಜ್ಜನ ದುರ್ಜನರಿಬ್ಬರ ಮೇಲೂ ಪ್ರಕಾಶಿಸುವಂತೆ ಮಾಡುತ್ತಾನೆ, ಒಳ್ಳೆಯವರ ಮತ್ತು ಕೇಡಿಗರಿಬ್ಬರ ಮೇಲೂ ಮಳೆ ಸುರಿಸುತ್ತಾನೆ. ಆದ್ದರಿಂದ ಆ ನಿಮ್ಮ ಸ್ವರ್ಗದಲ್ಲಿರುವ ತಂದೆಯ ಹಾಗೆಯೇ ನೀವೂ ಪರಿಪೂರ್ಣರಾಗಿರಿ" (ಮ್ಯಾಥ್ಯೂ. ೫:೪೫.೪೮). ಯಾವುದೇ ಹಿಂಜರಿಕೆಯಿಲ್ಲದೆ ಪ್ರೇಮಿಸಬೇಕೆಂದು ಹೇಳುವ, ಪರಿಪೂರ್ಣತೆ ಬೇಡುವ ದೇವರ ನೀತಿ ಅಸಹಜವಾದುದು ಎನ್ನುತ್ತೇವೆ; ಆದರೆ ಅದಕ್ಕೆ ಕಾರಣ ದೇವರ ಅಪರಿಮಿತವಾದ ತುಂಬು ಪ್ರೇಮವನ್ನು ನಾವು ಪರಿಭಾವಿಸದೆ ಇರುವುದೇ ಆಗಿದೆ ಎಂದು ಏಸುಕ್ರಿಸ್ತ ಹೇಳುತ್ತಾನೆ. ಏಸುವು ನಮಗೆ ಯಾವುದೇ ಒಂದು ನಿಯಮಾವಳಿ ಪುಸ್ತಕ ಮಾಡಿಕೊಡಲಿಲ್ಲ. ಅವನು ಹೇಳಿರುವುದು ನಾವು ಯಾವ ಧೋರಣೆಯಲ್ಲಿ ಜನರೊಡನೆ ವ್ಯವಹರಿಸಬೇಕು ಎಂದು ಮಾತ್ರ.

ಹೀಗೆ **ಅವನ ಬೋಧನೆಗಳು ಕೇವಲ ಬೋಧನೆಗಳಲ್ಲ, ಅವೇ ಅವನ ನಿಜಬದುಕು ಎಂದು ನಮಗನ್ನಿಸುವುದರಿಂದಲೇ ಅವು ನಮ್ಮನ್ನು ಗಾಢವಾಗಿ ತಟ್ಟುವುದು.**

**ಎಂಥವನಾಗಿದ್ದ?**

ನಮಗೆ ಗೊತ್ತಿರುವ ಹಾಗೆ, ಅವನ ಇಡೀ ಬದುಕು **ವಿನೀತ ಭಾವ, ಸ್ವಾರ್ಥತ್ಯಾಗ, ಅಹೈತುಕ ಪ್ರೇಮಗಳಿಂದ ಕೂಡಿತ್ತು.** 'ನೀವು ನನ್ನನ್ನೇಕೆ ಒಳ್ಳೆಯವನೆಂದು ಕರೆಯುತ್ತೀರಿ? ದೇವರು ಮಾತ್ರವೇ ಒಳ್ಳೆಯವನು ಎಂಬುದು ನಿಮಗೆ ಗೊತ್ತಿಲ್ಲವೆ?' ಎಂದು ಆತನೇ ಹೇಳಿದ್ದಾನೆ. ಅಹಂಕಾರರಾಹಿತ್ಯವೇ ಮೂರ್ತೀಭವಿಸಿದಂತಿದ್ದ ಅವನ ಮಾತುಗಳು ಯಾವುದೇ ವಂಚನೆಯಿಂದ ಕಳಂಕಿತನಾಗಿಲ್ಲದಿದ್ದವನು ಮಾತ್ರವೇ ಹೇಳಬಹುದಾದ ಮಾತುಗಳಾಗಿವೆ. ಹೀಗಾಗಿ, ಸತ್ಯವೇ ಏಸುವಿನ ಉಸಿರಾಗಿತ್ತು ಎನ್ನುವುದರಲ್ಲಿ ಸಂಶಯವಿಲ್ಲ.

ಸತ್ಯವೇದದ(Bible) ಪುಟಗಳಲ್ಲಿ ಹೊರಹೊಮ್ಮುವ ಏಸುಕ್ರಿಸ್ತ ಸರ್ವಶಕ್ತನಾಗಿದ್ದನು. ಆದರೂ ಅದಕ್ಕಿಂತ ಹೆಚ್ಚಿನದು ಅವನ ದಿವ್ಯಪ್ರೇಮ. ಅವನ ಪ್ರೀತಿಗೆ ಪ್ರತಿಯಾಗಿ ಅಸಂಖ್ಯ ಜನರು ಅವನ ಮೇಲೆ ಗಾಢವಾದ ಪ್ರೀತಿಯ ಮಳೆಗರೆಯುತ್ತಿದ್ದರು. ಕೇವಲ ಅವನ ಚುಂಬಕ ವ್ಯಕ್ತಿತ್ವದಿಂದ ಮಾತ್ರವಲ್ಲ, ಅವನ ಅನುಕಂಪದಿಂದಾಗಿ ಹತ್ತಿರಕ್ಕೆ ಸೆಳೆಯಲ್ಪಟ್ಟು ಜನರು ಅವನನ್ನು ಸುತ್ತುವರೆದಿರುತ್ತಿದ್ದರು, ಅವನನ್ನು ಅನುಸರಿಸುತ್ತಿದ್ದರು. ಅವರು ಬಡವರಾಗಿರಲಿ ಸಿರಿವಂತರಾಗಿರಲಿ, ಸಣ್ಣವರಾಗಿರಲಿ ದೊಡ್ಡವರಾಗಿರಲಿ, ಸಾಧುಗಳಾಗಿರಲಿ ವಂಚಕರಾಗಿರಲಿ, ಯಾವ ಭೇದಭಾವವನ್ನೂ ಗಮನಿಸದೆ ಜನರ ಆ ವರ್ತನೆಗೆ ಸಮಾನವಾಗಿಯೇ ಆತನೂ ಪ್ರತಿಕ್ರಿಯಿಸುತ್ತಿದ್ದನು. ಮಕ್ಕಳನ್ನು ಕಂಡರೆ ಅವನಿಗೆ ಅತಿಶಯ ಪ್ರೀತಿ. ಜನರನ್ನು ಕುಗ್ಗಿಸುವ ಅನ್ಯಾಯವನ್ನು, ಅದರಲ್ಲೂ ಬಾಂಧವ್ಯ ಬೆಳೆಸುವುದಕ್ಕೇ ಬಿಡದಂತೆ ಜನರನ್ನು ಮೋಸಗೊಳಿಸುವ ಆಷಾಢಭೂತಿತನವನ್ನು ಆತನು ದ್ವೇಷಿಸುತ್ತಿದ್ದನು. ಒಟ್ಟಾರೆ, **ಮಾನವಸಹಜ ಅಹಂಕಾರ ಸ್ವಲ್ಪವೂ ಇಲ್ಲದೆ, ಭಗವದಿಚ್ಛೆಯೇ ಮೈವೆತ್ತಂತೆ, ಸಂಪೂರ್ಣ ಪಾರದರ್ಶಕವಾಗಿ ಇರುವ ಒಬ್ಬನು ಇಲ್ಲಿದ್ದಾನೆ ಎಂಬುದು ಆತನ ಜೊತೆಗೆ ಒಡನಾಡಿದವರಿಗೆ ಕೊನೆಗೆ ಮನದಟ್ಟಾಗುತ್ತಿದ್ದಿತು; ಮಾನವರೂಪಿನಲ್ಲಿ ದೇವರೇ ಬಂದು ತಮ್ಮೆದುರಿಗೆ ನಿಂತಿರುವನು ಎಂದೆನಿಸುತ್ತಿದ್ದಿತು.** ಈ ಪುರಾತನ ಪ್ರಾರ್ಥನೆಯಲ್ಲಿ ಇದು ಢಾಳವಾಗಿ ಅಭಿವ್ಯಕ್ತವಾಗಿದೆ: 'ಆತನ ಮಹಿಮೆಯನರಿತೆವು ನಾವು... ಸತ್ಯ–ಅನುಗ್ರಹ ತುಂಬಿದ ಅವನನು' (ಜಾನ್ ೧:೧೪). ಶತಮಾನಗಳ ನಂತರ ಷೇಕ್ಸ್‌ಪಿಯರ್ ಹಾಡಿರುವುದೂ ಈ ಭಾವನೆಯನ್ನೇ:

**ಬಂತೆಮ್ಮ ರಕ್ಷಕನ ಜನ್ಮದಿನ ಋತುಕಾಲ**
**ರಾತ್ರಿಯಿಡೀ ಹಾಡುವುವು ಉದಯ ಚೆಲುವಕ್ಕಿಗಳು**
**ಮತ್ತೆ ಅವರೆನ್ನುವರು: ಭೂತಸಂಚಾರ–**
**ಯಾವುದೂ ಇಲ್ಲದೆಯೆ ಮುದವೀವ ರಾತ್ರಿಗಳು.**